**File No.ENERGY/331/VSC/2021-JD-ENERGY SECRETARIAT**

**ಕರ್ನಾಟಕ ಸರ್ಕಾರ**

**ಸಂಖ್ಯೆ:ಇಎನ್ 331 ವಿಎಸ್‌ಸಿ 2021**

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ: 31-03-2021

**ಇವರಿಂದ:-**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ, ವಿಕಾಸಸೌಧ,
ಬೆಂಗಳೂರು.

**ಇವರಿಗೆ:-**

ವ್ಯವಸ್ಥಾಪಕ ನಿರ್ದೇಶಕರು,
ಬೆವಿಕಂ/ಚಾವಿಸನಿನಿ/ಮವಿಕಂ/ಹುವಿಕಂ/ಗುವಿಕಂ/ಕ್ರೆಡಲ್

GM (Tech) KREDL

All AGMs

TO - BCW

TO - SG 07/04/21

**ಮಾನ್ಯರೇ,**

**ವಿಷಯ:** ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ ನಿರ್ದಿಷ್ಟಪಡಿಸಿದಂತೆ ಮತ್ತು ಎಲ್ಲಾ ವರ್ಗದ ಉದ್ಯಮಿಗಳಿಗೆ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿಯನ್ನು ನೀಡಿ ಆದೇಶಿಸಿರುವ ಬಗ್ಗೆ.

**ಉಲ್ಲೇಖ:** ಕಂದಾಯ ಇಲಾಖೆಯ ಅಧಿಸೂಚನೆ ಸಂಖ್ಯೆ: ಕಂಇ 63 ಮುನೋಮು 2017 ದಿನಾಂಕ 09.03.2021

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಂದಾಯ ಇಲಾಖೆಯ ಉಲ್ಲೇಖಿತ ಅಧಿಸೂಚನೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಅಧಿಸೂಚನೆಯಲ್ಲಿ, ಕರ್ನಾಟಕ ವಿದ್ಯುತ್ ವಾಹನ ಮತ್ತು ಇಂಧನ ಸಂಗ್ರಹಣ ನೀತಿ 2017ರಲ್ಲಿ ಪ್ರಸ್ತಾಪಿಸಿರುವಂತೆ ಸೂಕ್ಷ್ಮ, ಸಣ್ಣ, ಮಧ್ಯಮ ಹಾಗೂ ಭಾರಿ, ಮೆಗಾ, ಅಲ್ಟ್ರಾಮೆಗಾ, ಸೂಪರ್ ಮೆಗಾ, ಉದ್ದಿಮೆಗಳಿಗೆ ಸಂಬಂಧಿಸಿದಂತೆ ಪ್ರೋತ್ಸಾಹಕವನ್ನು (Incentives) ಘೋಷಿಸಿರುವುದರಿಂದ ಹಾಗೂ ಇಡೀ ರಾಜ್ಯವನ್ನು ಒಂದೇ ವಲಯವನ್ನಾಗಿ ವರ್ಗೀಕರಿಸುವುದರಿಂದ ಎಲ್ಲಾ ಪ್ರೋತ್ಸಾಹ ಮತ್ತು ರಿಯಾಯಿತಿಗಳು ರಾಜ್ಯದ ಎಲ್ಲಾ ಪ್ರದೇಶಗಳಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ 1957 (1957ರ 37ನೇ ಕರ್ನಾಟಕ ಕಾಯ್ದೆ) ಕಲಂ 9ರ ಉಪ ಕಲಂ(1)ರಲ್ಲಿ ಹಾಗೂ ನೋಂದಣಿ ಕಾಯ್ದೆ 1908 (ಕೇಂದ್ರೀಯ ಕಾಯ್ದೆ, 1908 XVI ನೇ ಕಾಯ್ದೆ) ಕಲಂ 78ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ ನಿರ್ದಿಷ್ಟಪಡಿಸುವಂತೆ ಮತ್ತು ಎಲ್ಲಾ ವರ್ಗದ ಉದ್ಯಮಿಗಳಿಗೆ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿಯನ್ನು ನೀಡಿ ಆದೇಶಿಸಲಾಗಿದೆ.

ಸದರಿ ಅಧಿಸೂಚನೆಯ ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

N. Mangalagowri 31/3/21

(ಎನ್. ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.
31.3.21

Upload in website

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 63 ಮುನೋಮು 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 09-03-2021

## ಅಧಿಸೂಚನೆ

ಸರ್ಕಾರದ ಆದೇಶ ಸಂಖ್ಯೆ ಸಿಐ 117 ಎಸ್‌ಪಿಐ 2017, ದಿನಾಂಕ:25-09-2017ರನ್ವಯ ಕರ್ನಾಟಕ ವಿದ್ಯುತ್ ವಾಹನ ಮತ್ತು ಇಂಧನ ಸಂಗ್ರಹಣ ನೀತಿ 2017ರನ್ನು ಜಾರಿಗೊಳಿಸಿದ್ದು, ಈ ನೀತಿಯಲ್ಲಿ ಪ್ರಸ್ತಾಪಿಸಿರುವಂತೆ ಸೂಕ್ಷ್ಮ, ಸಣ್ಣ, ಮಧ್ಯಮ ಹಾಗೂ ಭಾರಿ, ಮೆಗಾ, ಅಲ್ಟ್ರಾಮೆಗಾ, ಸೂಪರ್ ಮೆಗಾ, ಉದ್ದಿಮೆಗಳಿಗೆ ಸಂಬಂಧಿಸಿದಂತೆ ಪ್ರೋತ್ಸಾಹಕವನ್ನು (incentives) ಘೋಷಿಸಲಾಗಿರುತ್ತದೆ ಹಾಗೂ ಇಡೀ ರಾಜ್ಯವನ್ನು ಒಂದೇ ವಲಯವನ್ನಾಗಿ ವರ್ಗೀಕರಿಸುವುದರಿಂದ ಎಲ್ಲಾ ಪ್ರೋತ್ಸಾಹ ಮತ್ತು ರಿಯಾಯಿತಿಗಳು ರಾಜ್ಯದ ಎಲ್ಲಾ ಪ್ರದೇಶಗಳಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ 1957 (1957ರ 37ನೇ ಕರ್ನಾಟಕ ಕಾಯ್ದೆ) ಕಲಂ 9ರ ಉಪ ಕಲಂ(1) ರಲ್ಲಿ ಹಾಗೂ ನೋಂದಣಿ ಕಾಯ್ದೆ 1908 (ಕೇಂದ್ರೀಯ ಕಾಯ್ದೆ, 1908 XVIನೇ ಕಾಯ್ದೆ) ಕಲಂ 78ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ ನಿರ್ದಿಷ್ಟಪಡಿಸಿದಂತೆ ಮತ್ತು ಎಲ್ಲಾ ವರ್ಗದ ಉದ್ಯಮಿಗಳಿಗೆ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿಯನ್ನು ಕೆಳಕಂಡಂತೆ ನೀಡಿ ಆದೇಶಿಸಿದೆ.

| ಕ್ರ ಸಂ | ಕೈಗಾರಿಕೆಗಳ ಗಾತ್ರ ಹಾಗೂ ವಿವರ | ಮುದ್ರಾಂಕ ಶುಲ್ಕ ವಿನಾಯಿತಿ ದರ | ನೋಂದಣಿ ಶುಲ್ಕ ದರ |
|---|---|---|---|
| ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು (ಎಂ.ಎಸ್.ಎಂ.ಇ.) | | | |
| 1 | (1) Electric Vehicle (EV) and its component Manufacturing Enterprises<br>(2) EV Cell Manufacturing, EV Battery Pack/Module Manufacturing & Assembly Enterprises.<br>(3) EV Charging Infrastructure Equipment / Components Manufacturing, EV Battery Swapping Infrastrueture Equipment / Component Manufacturing Enterprises.<br><br>(i) ರಾಜ್ಯ ಸರ್ಕಾರ ಮತ್ತು/ಅಥವಾ ರಾಜ್ಯ ಹಣಕಾಸು ಸಂಸ್ಥೆ, ರಾಷ್ಟ್ರ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಖಾದಿ ಮತ್ತು ಗ್ರಾಮೋದ್ಯೋಗ ಕಮಿಷನ್, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ/ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚಿಸಲ್ಪಡುವ ಇತರೆ ಸಂಸ್ಥೆಗಳಿಂದ ಸಾಲ ಪಡೆಯಲು ಬರೆದುಕೊಡುವ ಸಾಲ ಕರಾರು, ಕ್ರೆಡಿಟ್ ಡೀಡ್, ಅಡಮಾನ ಪತ್ರಗಳು ಮತ್ತು ಒತ್ತೆ ಪತ್ರಗಳು | ಎಲ್ಲಾ ವಲಯಗಳಿಗೆ ಶೇ.100% ರಷ್ಟು ವಿನಾಯಿತಿ | ರೂ.1000/- ಗಳಿಗೆ ರೂ.1/- ರಂತೆ |

. . . 2

| | | | |
|---|---|---|---|
| | (ii) ಕೆ.ಐ.ಎ.ಡಿ.ಬಿ, ಕೆ.ಎಸ್.ಎಸ್.ಐ.ಡಿ.ಸಿ, ಕಿಯೋನಿಕ್ಸ್, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು / ಪಾರ್ಕ್‌ಗಳಲ್ಲಿ ಕೈಗಾರಿಕಾ ಪ್ಲಾಟ್‌ಗಳು, ಶೇಡ್‌ಗಳು, ಕೈಗಾರಿಕಾ ಟೆನೆಮೆಂಟ್ಸ್‌ಗಳ ಸಂಬಂಧವಾಗಿ ಬರೆದುಕೊಡುವ ಲೀಸ್ ಡೀಡ್, ಲೀಸ್-ಕಂ-ಸೇಲ್, ಸಬ್ ಲೀಸ್ ಮತ್ತು ಶುದ್ಧ ಕ್ರಯ ಡೀಡ್‌ಗಳಿಗೆ.<br>**ಸೂಚನೆ:-**<br>(i) ಕರ್ನಾಟಕ ಭೂಸುಧಾರಣಾ ಕಾಯ್ದೆ, 1964ರಡಿ ಕಲಂ 109 ರಂತೆ ಖರೀದಿಸಿದ ಜಮೀನುಗಳಿಗೆ ಮತ್ತು SLSWCC/ DLSWCC ಗಳಿಂದ ಅನುಮೋದಿಸಲ್ಪಟ್ಟ, ಕೈಗಾರಿಕೆಗಾಗಿ ಪರಿವರ್ತಿಸಲ್ಪಟ್ಟ ಜಮೀನುಗಳ ನೇರ ಖರೀದಿಗಳಿಗೂ ಅನ್ವಯಿಸುತ್ತವೆ.<br>ಲೀಸ್ ಅವಧಿ ಮುಕ್ತಾಯವಾದ ನಂತರ, ಜಮೀನುಗಳು, ಶೇಡ್‌ಗಳು, ಪ್ಲಾಟ್‌ಗಳು, ಕೈಗಾರಿಕಾ ಟೆನೆಮೆಂಟ್‌ಗಳ ನೋಂದಣಿ ಸಂಬಂಧವಾಗಿ ಬರೆದುಕೊಡುವಂತಹ ಅಂತಿಮ ಕ್ರಯ ಪತ್ರಗಳಿಗೂ ಸಹ ಲೀಸ್-ಕಂ-ಸೇಲ್ ಪತ್ರ ಬರೆದುಕೊಟ್ಟ ದಿನಾಂಕದಂದು ಜಾರಿಯಲ್ಲಿದ್ದ ದರಗಳನ್ನೇ ಅನ್ವಯಿಸುತ್ತವೆ. | | |
| **ಭಾರಿ, ಮೆಗಾ, ಅಲ್ಟ್ರಾಮೆಗಾ, ಸೂಪರ್ ಮೆಗಾ ಉದ್ದಿಮೆಗಳು** | | | |
| 2 | (1) Electric Vehicle (EV) and its component Manufacturing Enterprises<br>(2) EV Cell Manufacturing, EV Battery Pack/Module Manufacturing & Assembly Enterprises.<br>(3) EV Charging Infrastructure Equipment / Components Manufacturing, EV Battery Swapping Infrastructure Equipment / Component Manufacturing Enterprises.<br>(i) ಇಲಾಖೆಯಿಂದ ಪಡೆಯುವ ವ್ಯಾಟ್/ಎಸ್.ಜಿ.ಎಸ್.ಟಿ ಸಾಲಗಳನ್ನು ಒಳಗೊಂಡಂತೆ ರಾಜ್ಯ ಸರ್ಕಾರ ಮತ್ತು/ಅಥವಾ ರಾಜ್ಯ ಹಣಕಾಸು ಸಂಸ್ಥೆ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚಿಸಲ್ಪಡುವ ಇತರೆ ಸಂಸ್ಥೆಗಳಿಂದ ಸಾಲ ಪಡೆಯಲು ಬರೆದುಕೊಡುವ ಸಾಲ ಕರಾರು, ಕ್ರೆಡಿಟ್ ಡೀಡ್, ಅಡಮಾನ ಪತ್ರಗಳು ಮತ್ತು ಒತ್ತೆ ಪತ್ರಗಳು<br>(ii) ಕೆ.ಐ.ಎ.ಡಿ.ಬಿ, ಕೆ.ಎಸ್.ಐ.ಐ.ಡಿ.ಸಿ, ಕಿಯೋನಿಕ್ಸ್, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳಲ್ಲಿ ಕೈಗಾರಿಕಾ ಪ್ಲಾಟ್‌ಗಳು, ಶೇಡ್‌ಗಳು, ಕೈಗಾರಿಕಾ ಟೆನೆಮೆಂಟ್ಸ್‌ಗಳ ಸಂಬಂಧವಾಗಿ ಬರೆದುಕೊಡುವ ಲೀಸ್ ಡೀಡ್, ಲೀಸ್-ಕಂ-ಸೇಲ್, ಸಬ್ ಲೀಸ್ ಮತ್ತು ಶುದ್ಧ ಕ್ರಯ ಡೀಡ್‌ಗಳಿಗೆ.<br>**ಸೂಚನೆ:-**<br>(i) ಕರ್ನಾಟಕ ಭೂಸುಧಾರಣಾ ಕಾಯ್ದೆ, 1964ರಡಿ ಕಲಂ 109 ರಂತೆ | ಎಲ್ಲಾ ವಲಯಗಳಿಗೆ ಶೇ.100% ರಷ್ಟು ವಿನಾಯಿತಿ | ರೂ.1000/- ಗಳಿಗೆ ರೂ.1/- ರಂತೆ |

| | | | |
|---|---|---|---|
| | ಖರೀದಿಸಿದ ಜಮೀನುಗಳಿಗೆ ಮತ್ತು SHLCC / SLSWCC ಗಳಿಂದ ಅನುಮೋದಿಸಲ್ಪಟ್ಟ, ಕೈಗಾರಿಕೆಗಾಗಿ ಪರಿವರ್ತಿಸಲ್ಪಟ್ಟ ಜಮೀನುಗಳ ನೇರ ಖರೀದಿಗಳಿಗೂ ಅನ್ವಯಿಸುತ್ತವೆ.<br>(ii) ಲೀಸ್ ಅವಧಿ ಮುಕ್ತಾಯವಾದ ನಂತರ, ಜಮೀನುಗಳು, ಶೆಡ್‌ಗಳು, ಫ್ಲಾಟ್‌ಗಳು, ಕೈಗಾರಿಕಾ ಟೆನೆಮೆಂಟ್‌ಗಳ ನೋಂದಣಿ ಸಂಬಂಧವಾಗಿ ಬರೆದುಕೊಡುವಂತಹ ಅಂತಿಮ ಕ್ರಯ ಪತ್ರಗಳಿಗೂ ಸಹ ಲೀಸ್-ಕಂ-ಸೇಲ್ ಪತ್ರ ಬರೆದುಕೊಟ್ಟ ದಿನಾಂಕದಂದು ಜಾರಿಯಲ್ಲಿದ್ದ ದರಗಳನ್ವಯ ಅನ್ವಯಿಸುತ್ತವೆ. | | |

ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಿನಾಯಿತಿ/ರಿಯಾಯಿತಿ ಪಡೆಯಲು ಅನುಬಂಧ-1 ಮತ್ತು ಅನುಬಂದ-2 ರಲ್ಲಿ ನಿಗಧಿಸಡಿಸಿರುವಂತೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಧಿಕಾರಿಗಳಿಂದ ದೃಡೀಕರಿಸ್ಪಟ್ಟ ಪ್ರಪತ್ರವನ್ನು ದಸ್ತಾವೇಜು ನೋಂದಣಿ ಸಮಯದಲ್ಲಿ ಒದಗಿಸುವುದು. ಈ ಪ್ರಪತ್ರದಲ್ಲಿ ಪ್ರಮಾಣೀಕರಿಸಿದ ಮಾಹಿತಿಯ ಆಧಾರದ ಮೇಲೆ ಮಾತ್ರ ಮುದ್ರಾಂಕ ಶುಲ್ಕ/ನೋಂದಣಿ ಶುಲ್ಕ ರಿಯಾಯಿತಿ ನೀಡುವ ಬಗ್ಗೆ ಪರಿಶೀಲಿಸಿ ದಸ್ತಾವೇಜುಗಳನ್ನು ನೋಂದಣಿ ಮಾಡತಕ್ಕದ್ದು.

ಈ ವಿನಾಯಿತಿ/ರಿಯಾಯಿತಿಯು ಈ ಅಧಿಸೂಚನೆಯ ದಿನಾಂಕದಿಂದ ಕರ್ನಾಟಕ ವಿದ್ಯುತ್ ವಾಹನ ಮತ್ತು ಇಂಧನ ಸಂಗ್ರಹಣ ನೀತಿ 2017 ರ ಸಂಖ್ಯೆಸಿಪಿ 117 ಎಸ್‌ಪಿಐ 2017, ದಿನಾಂಕ: 25-09-2017 ರಲ್ಲಿ ಆದೇಶದಲ್ಲಿ ನಮೂದಿಸಿರುವಂತೆ ಅಥವಾ ಮುಂದಿನ ಹೊಸ ನೀತಿ ಘೋಷಣೆಯಾಗುವವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ವಿಕೇಶ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು -ಇ-ಗೆಜೆಟ್‌ನಲ್ಲಿ ಪ್ರಕಟಿಸಲು ಕೋರಿದೆ.

**ಪ್ರತಿ:**

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು.
4) ಸರ್ಕಾರದ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ಬೆಂಗಳೂರು.
5) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು.

6) ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು.
7) ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳು / ಎಲ್ಲಾ ಉಪ ನೋಂದಣಾಧಿಕಾರಿಗಳು – ಐಜಿಆರ್ ರವರ ಮುಖಾಂತರ.

**ಮಾಹಿತಿಗಾಗಿ ಪ್ರತಿ:**

1) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ ಮತ್ತು ಯುಪಿಓಆರ್) ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ನೋಂದಣಿ ಮತ್ತು ಮುದ್ರಾಂಕ) ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7) ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು

# ಅನುಬಂಧ-1

ಕರ್ನಾಟಕ ವಿದ್ಯುತ್ ವಾಹನ ಮತ್ತು ಇಂಧನ ಸಂಗ್ರಹಣ ನೀತಿ 2017 ರನ್ವಯ ಸಾಲದ ಪತ್ರಗಳ ಬಗ್ಗೆ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ದೃಢೀಕರಣ ಪತ್ರದ ನಮೂನೆ.

## ಪ್ರಮಾಣ ಪತ್ರ

ವಿಷಯ : _______________ ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:1.ಸರ್ಕಾರಿ ಆದೇಶ ಸಂಖ್ಯೆ:ಸಿಐ 117 ಎಸ್‌ಪಿಐ 2017, ದಿನಾಂಕ:25-09-2017.

2.ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ:ಕಂ.ಇ/ _______________

ದಿನಾಂಕ: __________.

3.ಮೆ:_____________ರವರ ಪತ್ರ ಸಂಖ್ಯೆ:__________ದಿನಾಂಕ: _____

******

(i) ಮೆ: ___________________ನ (*) ಮಾಲೀಕರಾದ / ಪಾಲುದಾರರಾದ / ವ್ಯವಸ್ಥಾಪಕ ನಿರ್ದೇಶಕರಾದ / ನಿರ್ದೇಶಕರಾದ ಶ್ರೀ _____________ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಹೊಸ ಕೈಗಾರಿಕಾ ಘಟಕವಾಗಿದ್ದು/ವಿಸ್ತರಣೆ/ನವೀಕರಣ/ವೈವಿಧ್ಯೀಕರಣ ಕೈಗೊಂಡಿದ್ದು; ಭಾರತ ಸರ್ಕಾರದಲ್ಲಿ ನೋಂದಣಿ ಮಾಡಿಸಿದ್ದು, ನೋಂದಣಿ ಸಂಖ್ಯೆ: _________ ದಿನಾಂಕ: _______ ರಂತೆ UR/IEM/IL ನ್ನು ಪಡೆದಿರುತ್ತದೆ.

(ii) ಈ ಘಟಕವು ಸರ್ಕಾರ ಹೊರಡಿಸಿರುವ ಕರ್ನಾಟಕ ವಿದ್ಯುತ್ ವಾಹನ ಮತ್ತು ಇಂಧನ ಸಂಗ್ರಹಣ ನೀತಿ 2017 ಆದೇಶ ಸಂಖ್ಯೆ: ಸಿಐ 117 ಎಸ್‌ಪಿಐ 2017 ಬೆಂಗಳೂರು ದಿನಾಂಕ: 25-09-2017 ರ (*) ಪ್ರಕಾರ ಸೂಪರ್ ಮೆಗಾ/ ಅಲ್ಟ್ರಾ ಮೆಗಾ/ ಮೆಗಾ / ಭಾರಿ / ಮಧ್ಯಮ / ಸಣ್ಣ / ಸೂಕ್ಷ್ಮ ಉದ್ಯಮ ಎಂದು ದೃಢೀಕರಿಸಿದೆ.

(iii) ಈ ಘಟಕದ ಪ್ರಸ್ತಾಪಿತ ಯೋಜನೆಯನ್ನು (*) DLSWCC/SLSWCC/SHLCC ರವರು ದಿ:______.. ರಂದು ನಡೆದ ಇವರ _____ ಸಭೆಯಲ್ಲಿ ಅನುಮೋದಿಸಿರುತ್ತಾರೆ. (ಇದ್ದಲ್ಲಿ)

(iv) ಈ ಉದ್ಯಮಕ್ಕೆ _________ (ಸಾಲ ನೀಡುವ ಬ್ಯಾಂಕ್ ಸಂಸ್ಥೆ)/ಸಂಸ್ಥೆ ವಿವರ ನೀಡುವುದು) ರವರು ರೂ______ ಅವಧಿ/ ದುಡಿಮೆ ಬಂಡವಾಳ ಸಾಲವನ್ನು ರೂ________ ಯೋಜನಾ ವೆಚ್ಚದಲ್ಲಿ ____________. ಉತ್ಪನ್ನವನ್ನು ತಯಾರಿಸಲು ಮಂಜೂರು ಮಾಡಿರುತ್ತದೆ / ರೂ.___________ VAT/SGST ಪಾವತಿ ಮೇಲೆ ನೀಡುವ ಬಡ್ಡಿ ರಹಿತ ಸಾಲ ಸರ್ಕಾರದಿಂದ ಮಂಜೂರಾಗಿರುತ್ತದೆ.

. . . 2